
ಪುಟ ಬಂಗಾರ

# ಗೋವಿನ ಕಥೆ



**ಕೀರ್ತಿನಾಥ ಕುರ್ತಕೋಟಿ**

ಹಿಂದಿನ ಲೇಖನದಲ್ಲಿ ಜಾನಪದ ಕಾವ್ಯದ ವ್ಯಂಜಕ ಶಕ್ತಿಯನ್ನು ನೋಡಿದ್ದಾಯಿತು. ಈ ವ್ಯಂಜಕತೆಯಿಂದಾಗಿ ಆ ಕಾವ್ಯ ತನ್ನ ರೀತಿಯಲ್ಲಿ ಪರಿಷ್ಕಾರವನ್ನೂ ಪಡೆಯುತ್ತದೆ. 'ಬೆಳ್ಳನ್ನ ಎರಡೆತ್ತು ಬೆಳ್ಳಿಯ ಬಾರುಕೋಲು' ಎಂಬ ಕಾವ್ಯಪಂಕ್ತಿಯಲ್ಲಿಯ ಪರಿಷ್ಕಾರ ಈ ಬಗೆಯದು. ಬೆಳ್ಳನ್ನ ಎರಡೆತ್ತುಗಳು ವಾಸ್ತವ ಚಿತ್ರವಾದರೆ, ಬೆಳ್ಳಿಯ ಬಾರುಕೋಲು ವಾಸ್ತವ ಜಗತ್ತಿಗೆ ಸೇರಿದ್ದಲ್ಲ. ಆದರೆ ಒಕ್ಕಲಿಗನ ಎರಡು ಎತ್ತುಗಳ ಶುಭ್ರವರ್ಣ ಬೆಳ್ಳಿಯ ಬಾರುಕೋಲನ್ನು ಬೇಡುತ್ತದೆ; ಎತ್ತುಗಳ ಮೇಲೆ ಒಕ್ಕಲಿಗನಿಗಿರುವ ಮಮತೆ ಅಂಥ ಒಂದು ಬಾರುಕೋಲನ್ನು ಸೃಷ್ಟಿಸುತ್ತದೆ. ಈ ಎರಡು ಚಿತ್ರಗಳ ಸಾದೃಶ್ಯದಲ್ಲಿರುವ ಹೃದಯದ ಶ್ರೀಮಂತಿಕೆ ಕಾವ್ಯಕ್ಕೆ ಪರಿಷ್ಕಾರವನ್ನು ಒದಗಿಸಿದೆ. 'ಚಂದ್ರುಣಿ ಚಂದನದ ಗೊಂಬಿ/ರತ್ನದ ಕಂಬಿ' ಎಂದು ಪ್ರಾರಂಭವಾಗುವ ಹಲಸಂಗಿಯ ಖ್ವಾಜಾಸಾಹೇಬನ ಶೃಂಗಾರಭರಿತವಾದ ಲಾವಣಿಯಲ್ಲಿಯೂ ಈ ಬಗೆಯ ಪರಿಷ್ಕಾರ ಕಂಡುಬರುತ್ತದೆ. ಜಾನಪದ ಕಾವ್ಯಜೀವನವನ್ನು ಗ್ರಹಿಸುವ ರೀತಿ ಇದು. ಜಾನಪದ ಕಾವ್ಯ ಜಗತ್ತಿನ ಯಾವ ವಸ್ತುವನ್ನೂ ಪ್ರೀತಿಯ ಕಣ್ಣಿನಿಂದ ನೋಡುವುದರಿಂದ, ನೋಡಿದ ವಸ್ತು ವ್ಯಕ್ತಿನಿಷ್ಠತೆಯಲ್ಲಿ ಕರಗಿಹೋಗುತ್ತದೆ. ಜಗತ್ತಿನ ವಸ್ತುಗಳನ್ನು ವಸ್ತುಗಳೆಂದೇ ಮತ್ತು ಅವುಗಳ ರೀತಿಯಲ್ಲಿಯೇ ಗ್ರಹಿಸಲು ಬೌದ್ಧಿಕತೆ ಬೇಕಾಗುತ್ತದೆ. ಜಾನಪದ ಕವಿ ಬುದ್ಧಿವಂತನಾಗಿರಬಹುದು. ಆದರೆ ಅವನು ಬೌದ್ಧಿಕನಲ್ಲ. ಆದ್ದರಿಂದ ಕಣ್ಣಿಗೆ ಕಂಡ ವಸ್ತು ಅವನ ಅನುಭವವಾಗಿ ಬಿಡುತ್ತದೆ. ಆದರೆ ಅಭಿವ್ಯಕ್ತಿಯಲ್ಲಿ ಇದಕ್ಕೆ ಮತ್ತೆ ವಸ್ತುನಿಷ್ಠತೆ ಬಂದುಬಿಡುತ್ತದೆ. ಮೇಲುನೋಟಕ್ಕೆ ಈ ವ್ಯಾಪಾರ ರೊಮ್ಯಾಂಟಿಕ್ ಪ್ರವೃತ್ತಿಯಂತೆ ಕಂಡರೂ ರೊಮ್ಯಾಂಟಿಕ್ ಕಾವ್ಯಕ್ಕೆ ಇಲ್ಲದ